| ಕರ್ನಾಟಕ ವಿಧಾನ ಪರಿಷತ್ | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 725(849) |
| ಸದಸ್ಯರ ಹೆಸರು | ಶ್ರೀ ಕೆ.ಅಬ್ದುಲ್ ಜಬ್ಬರ್ |
| ಉತ್ತರಿಸಬೇಕಾದ ದಿನಾಂಕ | 15.12.2025 |
| ಉತ್ತರಿಸುವವರು | ಮಾನ್ಯ ಅರಣ್ಯ ಜೀವಿಶಾಸ್ತ್ರ ಮತ್ತು ಪರಿಸರ ಸಚಿವರು |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಅರಣ್ಯ ಇಲಾಖೆಯಡಿ ಬರುವ ಡೀಮ್ಡ್ ಫಾರೆಸ್ಟ್ ಎಂದರೇನು; ಯಾವ-ಯಾವ ಆಧಾರದ ಮೇಲೆ ಡೀಮ್ಡ್ ಫಾರೆಸ್ಟ್ ಎಂದು ಘೋಷಿಸಲಾಗುತ್ತಿದೆ; ಡೀಮ್ಡ್ ಫಾರೆಸ್ಟ್ ಎಂದು ಘೋಷಿಸಲು ಇರುವ ಮಾನದಂಡಗಳೇನು; (ಸಂಪೂರ್ಣ ಮಾಹಿತಿ ಒದಗಿಸುವುದು) | ಮಾನ್ಯ ಸರ್ವೋಚ್ಚ ನ್ಯಾಯಾಲಯವು ರಿಟ್ ಅರ್ಜಿ ಸಂಖ್ಯೆ: 202/1995 ಕ್ಕೆ ಸಂಬಂಧಿಸಿದಂತೆ ದಿನಾಂಕ:12-12-1996ರಲ್ಲಿ ನೀಡಿದ ತೀರ್ಪಿನ ಆಧಾರದ ಮೇಲೆ ರಾಜ್ಯ ಸರ್ಕಾರದ ಆದೇಶ ಸಂ.FEE 185 FAF 2011, ಬೆಂಗಳೂರು, ದಿನಾಂಕ:15.05.2014 ರನ್ವಯ ಡೀಮ್ಡ್ ಫಾರೆಸ್ಟ್‌ಗಳನ್ನು ಗುರುತಿಸಲು ಕಂಡಿಕೆ 11(c) ಹಾಗೂ (d) ರಲ್ಲಿ ಈ ಕೆಳಕಂಡ ಕ್ಷೇತ್ರೀಯ ಮಾನದಂಡಗಳನ್ನು ಪರಿಗಣಿಸಲು ಸೂಚಿಸಲಾಗಿರುತ್ತದೆ.<br><br>11(c). "All Government land parcels (excluding those which are "statutory forests" and "forests as per Government records"), of an area of two hectares and above having atleast a density of 50 naturally grown trees per hectare of gbh of 30 cm and above (OR) All plantations on Government lands of an area of 2 Ha and above (excluding those which are "statutory forests" and "forests as per Government records") with a minimum density of 100 planted trees/ Ha of gbh of 30 cm and above. (gbh is girth of tree at breast height measured at a height of 4.5 feet from ground)."<br>11(d). Plantations of any kind on private lands shall not be considered as 'forests'. Private lands with naturally grown trees, with 50 trees per hectare of gbh 30 cm and above, on an extent of 5Ha and above shall only be treated as "private forests". |
| ಆ) | ಹಲವಾರು ವರ್ಷಗಳಿಂದ ಸಾಗುವಳಿ ಮಾಡಿ ಜೀವನಸಾಗಿಸುತ್ತಿದ್ದ ರೈತರ ಜಮೀನುಗಳನ್ನು ಡೀಮ್ಡ್ ಫಾರೆಸ್ಟ್ ಎಂದು ಘೋಷಿಸಿ, ರೈತರ ಜಮೀನುಗಳಿಗೆ ಬೇಲಿ ಹಾಕಲು ಮುಂದಾಗಿರುವುದು ಎಷ್ಟುಸರಿ; ಇದರ ಹಿಂದಿರುವ ಉದ್ದೇಶಗಳೇನು; | ಹಲವಾರು ವರ್ಷಗಳಿಂದ ಸಾಗುವಳಿ ಮಾಡಿ ಜೀವನ ಸಾಗಿಸುತ್ತಿದ್ದ ರೈತರ ಜಮೀನುಗಳನ್ನೂ ಡೀಮ್ಡ್ ಫಾರೆಸ್ಟ್ ಎಂದು ಘೋಷಿಸಲು ಇಲಾಖೆಯು ಮುಂದಾಗಿರುವುದಿಲ್ಲ. ಹಾಗೂ ರೈತರ ಜಮೀನುಗಳಿಗೆ ಬೇಲಿ ಹಾಕಲು ಸಹ ಮುಂದಾಗಿರುವುದಿಲ್ಲ. |
| ಇ) | ಡೀಮ್ಡ್ ಫಾರೆಸ್ಟ್ ಎಂದು ಘೋಷಿಸಿರುವ ಬಹುತೇಕ ಜಮೀನುಗಳು ರೈತರ ಹೆಸರಿನಲ್ಲಿದ್ದು, ಹಕ್ಕುಪತ್ರ ಪಹಣಿ ಎಲ್ಲವನ್ನೂ ಪಡೆದು ಸಾಗುವಳಿ ಮಾಡುತ್ತಿದ್ದ ಜಮೀನಾಗಿದ್ದು, ಅಂತಹ | ರಾಜ್ಯ ಸರ್ಕಾರದ ಆದೇಶ ಸಂ. FEE 185 FAF 2011, ಬೆಂಗಳೂರು, ದಿನಾಂಕ: 15.05.2014ರ ಕಂಡಿಕೆ 11(c) ರಲ್ಲಿ ವ್ಯಾಖ್ಯಾನಿಸಿರುವ ಮಾನದಂಡಕ್ಕೆ ಒಳಪಡುವ ಸರ್ಕಾರಿ ಭೂಮಿಗಳನ್ನು ಮಾತ್ರ ಡೀಮ್ಡ್‌ಫಾರೆಸ್ಟ್ ಎಂದು ಗುರುತಿಸಲಾಗಿರುತ್ತದೆ. |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| | ಜಮೀನುಗಳನ್ನು ಡೀಮ್ಡ್ ಫಾರೆಸ್ಟ್ ಎಂದು ಹೇಗೆ ಘೋಷಣೆ ಮಾಡಲಾಗುತ್ತಿದೆ; | ಮುಂದುವರೆದು, ರಾಜ್ಯ ಸರ್ಕಾರದ ಆದೇಶ ಸಂ. FEE 185 FAF 2011, ಬೆಂಗಳೂರು, ದಿನಾಂಕ: 15.05.2014ರ ಕಂಡಿಕೆ11(d) ರಲ್ಲಿ ವ್ಯಾಖ್ಯಾನಿಸಿರುವ ಮಾನದಂಡಕ್ಕೆ ಒಳಪಡುವ ಖಾಸಗಿ ಪ್ರದೇಶಗಳನ್ನು "ಖಾಸಗಿ ಅರಣ್ಯಗಳು" ಎಂದು ಮಾತ್ರ ಪರಿಗಣಿಸಲಾಗಿರುತ್ತದೆ.<br><br>ಆದಾಗ್ಯೂ, ಯಾವುದಾದರೂ ಖಾಸಗಿ ಜಮೀನುಗಳನ್ನು ಡೀಮ್ಡ್ ಫಾರೆಸ್ಟ್ ಎಂದು ತಪ್ಪಾಗಿ ಗುರುತಿಸಲಾಗಿದ್ದರೆ ಸರ್ಕಾರಿ ಆದೇಶ ಸಂಖ್ಯೆ: FEE 185 FAF 2011 ದಿನಾಂಕ: 06.03.2025 ರಂತೆ ಕ್ರೂಢೀಕೃತ ಅರಣ್ಯ ಪ್ರದೇಶಗಳನ್ನು ಗುರುತಿಸುವ ಪ್ರಕ್ರಿಯೆಯಲ್ಲಿ ಪರಿಷ್ಕರಿಸಲಾಗುತ್ತದೆ. |
| ಈ) | ಈ ರೀತಿ ಸಾಗುವಳಿ ಮಾಡಿಜೀವನ ನಡೆಸುತ್ತಿರುವ ರೈತರ ಜಮೀನುಗಳಿಗೆ ಆಗುತ್ತಿರುವ ಸಮಸ್ಯೆಯನ್ನು ತಡೆದು, ರೈತರಿಗೆ ನೆರವಾಗುವಂತೆ ಸರ್ಕಾರ ಯಾವ ರೀತಿಯ ಸೂಕ್ತಕ್ರಮಗಳನ್ನು ಕೈಗೊಳ್ಳುತ್ತದೆ? (ಸಂಪೂರ್ಣ ಮಾಹಿತಿ ಒದಗಿಸುವುದು). | |

**ಸಂಖ್ಯೆ: ಅಪಜೀ 114 ಎಫ್ಎಎಫ್ 2025**

**(ಈಶ್ವರ ಬಿ. ಖಂಡ್ರೆ)**
ಅರಣ್ಯ, ಜೀವಿ ಪರಿಸ್ಥಿತಿ ಮತ್ತು ಪರಿಸರ ಸಚಿವರು